**ದಿನಾಂಕ: 19-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:-2 ರಿಂದ 7 ಮತ್ತು 9 ರಿಂದ 13ನೇ ಪ್ರತಿವಾದಿಗಳ ಪರ ಶ್ರೀ.ಬಿ. ಟಿ. ಐ, ವಕೀಲರಿಂದ:-**

04. ನಿಪಿ-87 ಮತ್ತು 88 ನ್ನು ವಕೀಲರಾದ ಮಂಜುನಾಥ ರವರು ಓದಿ ನನಗೆ ತಿಳಿಸಿರುತ್ತಾರೆ. ವಕೀಲರಾದ ಮಂಜುನಾಥ್ ರವರು ನನ್ನ ಅಳಿಯ. ನಿಪಿ-87 ರಲ್ಲಿ ನನ್ನ ತಂದೆಯವರು ಸಿದ್ದಪ್ಪನವರಿಗೆ ಭೋಗ್ಯಕ್ಕೆ ಸ್ವತ್ತನ್ನು ಹಾಕಿದ್ದಾರೆ ಎಂದು ನಮೂದಿಸಲಾಗಿದೆ. ನಿಪಿ-88 ರಲ್ಲಿ ನನ್ನ ತಂದೆಯವರು 2ನೇ ಪ್ರತಿವಾದಿಯ ಗಂಡನವರಿಗೆ ಭೋಗ್ಯಕ್ಕೆ ಸ್ವತ್ತನ್ನು ಹಾಕಿದ್ದಾರೆ ಎಂದು ನಮೂದಿಸಲಾಗಿದೆ. ನನ್ನ ತಂದೆಯು ಯಾವ ಇಸವಿಯಲ್ಲಿ ಸಿದ್ದಪ್ಪನವರಿಂದ ದಾವಾಸ್ವತ್ತಿನ ಭೋಗ್ಯವನ್ನು ಬಿಡುಗಡೆ ಮಾಡಿಸಿಕೊಂಡಿದ್ದಾರೆ ಎಂದು ನನಗೆ ನೆನಪಿಲ್ಲ. ನಿಪಿ-88 ನ್ನು ಮಾಡುವ ಎಷ್ಟು ದಿನಗಳ ಹಿಂದೆ ನನ್ನ ತಂದೆಯವರು ಸಿದ್ದಪ್ಪನವರಿಂದ ದಾವಾಸ್ವತ್ತಿನಭೋಗ್ಯ ವನ್ನು ಬಿಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-87 ಮತ್ತು 88 ರಲ್ಲಿ ನಮೂದಿಸಿರುವ ಸ್ವತ್ತು ಒಂದೇ ಆಗಿದೆ. ನಿಪಿ-87 ಮತ್ತು 88ರಲ್ಲಿ ನಮೂದಿಸಿರುವ ಸ್ವತ್ತೇ ಈ ದಾವೆಯ ದಾವಾಸ್ವತ್ತುಗಳು ಆಗಿರುತ್ತದೆ.

05. ನನ್ನ ತಂದೆ ಮತ್ತು ದೊಡ್ಡಪ್ಪನವರ ನಡುವೆ ಆದ ವಿಭಾಗದಂತೆ ದಾವಾಸ್ವತ್ತುಗಳು ನನ್ನ ತಂದೆಯ ಭಾಗಕ್ಕೆ ಬಂದಿರುತ್ತದೆ. 5ನೇ ವಾದಿಯು ನನ್ನ ದೊಡ್ಡಪ್ಪನ ಮಗನಾಗಿರುತ್ತಾರೆ ಮತ್ತು ಅವರಿಗೂ ದಾವಾಸ್ವತ್ತುಗಳಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ನೀವು ಯಾವ ಕಾರಣಕ್ಕಾಗಿ 5ನೇ ವಾದಿಯನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸುಮ್ಮನೆ ಮಾಡಿದ್ದೇನೆ ಎನ್ನುತ್ತಾರೆ. ನಿಪಿ-87ರಲ್ಲಿ ನಮೂದಿಸಿರುವ ಸಿದ್ದಪ್ಪನ ಮಗಳು ಈ ದಾವೆಯ 1ನೇ ಪ್ರತಿವಾದಿ ಆಗಿರುತ್ತಾರೆ. ನಿಪಿ-87 ರಂತೆ ಮಾಡಿರುವ ಭೋಗ್ಯ

ಪತ್ರವನ್ನು ನನ್ನ ತಂದೆಯು ಸಿದ್ದಪ್ಪನವರಿಂದ ಬಿಡುಗಡೆ ಮಾಡಿಕೊಂಡಿರುವ ಕಾರಣದಿಂದ ದಾವಾಸ್ವತ್ತುಗಳಿಗೆ ಸಿದ್ದಪ್ಪನವರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ನೀವು ಯಾವ ಕಾರಣಕ್ಕಾಗಿ 1ನೇ ಪ್ರತಿವಾದಿಯನ್ನು ಪಕ್ಷಕಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯು ಸುಳ್ಳನ್ನು ಹೇಳಿಕೊಂಡು ಆಸ್ತಿಯನ್ನು ಕೇಳಬಹುದು ಎಂದು ಪಕ್ಷಕಾರರನ್ನಾಗಿ ಮಾಡಿದ್ದೇನೆ ಎನ್ನುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಾನು ನನ್ನ ವಕೀಲರಿಗೆ ನಿಪಿ-87 ರಂತೆ ಮಾಡಿರುವ ಭೋಗ್ಯ ಪತ್ರವನ್ನು ನನ್ನ ತಂದೆಯವರು ಸಿದ್ದಪ್ಪನವರಿಂದ ಬಿಡುಗಡೆ ಮಾಡಿಸಿಕೊಂಡಿರಿದ್ದಾರೆ ಎಂದು ಹೇಳಿರುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**